## ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ8(5)ಶಾಶಿಅಹೆಶಿ/37/2017-18 ದಿನಾಂಕ: 28.06.2017

**ಜ್ಞಾಪನ**

ವಿಷಯ: 2017-18ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸಿ ಕಾರ್ಯಭಾರವಿರುವ ಅನುದಾನಿತ ಪ್ರೌಢಶಾಲೆಗಳಿಗೆ ಮರುಹೊಂದಾಣಿಕೆ ಮಾಡುವ ಕುರಿತು.

ಉಲ್ಲೇಖ:1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 99, ದಿ: 03.02.2000.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಎಸ್.ಎಲ್.ಬಿ 2001 ದಿ: 16.01.2001.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 137 ಎಸ್ಇಪಿ 2000, ದಿ: 23.01.2002.
4. ಸರ್ಕಾರದ ಆದೇಶ ಸಂಖ್ಯೆ ಇಡಿ 69 ಎಸ್ಓಹೆಚ್ 2011, ದಿನಾಂಕ:31.03.2011.
5. ಈ ಕಛೇರಿಯ ಮುಂದುವರೆದ ಸೂಚನೆಗಳ ಸಂಖ್ಯೆ: ಸಿ8[7] ಶಾಶಿಅ ಹೆಚ್ಚುವರಿ ಹೆ ಶಿ/75/2009-10 ದಿನಾಂಕ: 01.10.2011 ಮತ್ತು 14.12.2011
6. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ8[1] ವರ್ಗ ಅನು 26/2015-16 ದಿನಾಂಕ: 28.02.2017.
7. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಎಸ್.ಇ.ಪಿ 2011, ದಿ: 16.07.2014.

****************

ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿಗಧಿತ ಕಾರ್ಯಭಾರವಿಲ್ಲದ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸಿ ಕಾರ್ಯಭಾರವಿರುವ ಅನುದಾನಿತ ಪ್ರೌಢಶಾಲೆಗಳಿಗೆ ಮರು ಹೊಂದಾಣಿಕೆ ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಲು ಉಲ್ಲೇಖ-1 ರಿಂದ 4ರ ಸರ್ಕಾರದ ಸುತ್ತೋಲೆಗಳಲ್ಲಿ ಆದೇಶಿಸಲಾಗಿದೆ. ಉಲೇಖ-6ರ ಈ ಕಛೇರಿಯ ಪತ್ರದಲ್ಲಿ ಹೆಚ್ಚುವರಿ ಶಿಕ್ಷಕರನ್ನು ತಮ್ಮ ಆಡಳಿತ ಮಂಡಳಿಯ ವ್ಯಾಪ್ತಿಯ ಶಾಲೆಗಳಿಗೆ ವರ್ಗಾಯಿಸುವಂತೆ ಮತ್ತು ವರ್ಗಾಯಿಸಲಾಗದ ಶಿಕ್ಷಕರನ್ನು ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ಕಳುಹಿಸುವಂತೆ ಸೂಚಿಸಲಾಗಿದೆ. ಮೇಲ್ಕಂಡ ಉಲ್ಲೇಖ-1 ರಿಂದ 4ರವರೆಗಿನ ಸರ್ಕಾರಿ ಸುತ್ತೋಲೆಗಳನ್ನು ಆಧರಿಸಿ 2017-18ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

**ಪ್ರಥಮ ಹಂತ:-**

1. ಆಡಳಿತ ಮಂಡಳಿ ವಹಿಸಬೇಕಾದ ಕ್ರಮ:-

ಆಡಳಿತ ಮಂಡಳಿಯ ವತಿಯಿಂದ ಒಂದಕ್ಕಿಂತ ಹೆಚ್ಚು ಅನುದಾನಿತ ಪ್ರೌಢಶಾಲೆಗಳು ನಡೆಯುತ್ತಿದ್ದು, ಅವುಗಳಲ್ಲಿ ನಿಗಧಿತ ಕಾರ್ಯಭಾರವಿಲ್ಲದ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಅವರದೇ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಇತರೆ ಕಾರ್ಯಭಾರವಿರುವ ಅನುದಾನಿತ ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಸ್ಥಳಾಂತರದ ಮೂಲಕ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಈ ರೀತಿ ಸ್ಥಳಾಂತರ ಮಾಡುವಾಗ ಆಡಳಿತ ಮಂಡಳಿಯವರು ಹುದ್ದೆ ಮಂಜೂರಾತಿಯಾಗಿ ಅನುದಾನಕ್ಕೆ ಒಳಪಟ್ಟಿರುವ ಅನುದಾನಿತ ಹುದ್ದೆಗಳು, ಪ್ರಸ್ತುತ ಸಾಲಿನ ಮಾನ್ಯತೆ ನವೀಕರಣದಲ್ಲಿ ಉಲ್ಲೇಖಿಸಿರುವ ವಿಭಾಗಗಳ ಸಂಖ್ಯೆ **ದಿನಾಂಕ: 10.07.2017ರ** ಅಂತ್ಯಕ್ಕೆ ಸರಾಸರಿ ಹಾಜರಾತಿ, ಈ ಹಾಜರಾತಿಯನ್ವಯ ಅವಕಾಶವಿರುವ ಅನುದಾನಿತ ವಿಭಾಗಗಳು, ವಿಷಯ ಹೊಂದಾಣಿಕೆಗೆ ಅನುಗುಣವಾಗಿ ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ

---> ೨

ಶಿಕ್ಷಣ ಕಾಯ್ದೆ - 1983ರ ಸಿಬ್ಬಂದಿ ಮಾದರಿ ಪ್ರಕಾರ ಸ್ಥಳಾಂತರ ಮಾಡಿಕೊಳ್ಳತಕ್ಕದ್ದು. ಈ ಪ್ರಕ್ರಿಯೆಯನ್ನು ಮುಗಿಸಿ, ಆಡಳಿತ ಮಂಡಳಿಯವರು ಅನುಮೋದನೆಗಾಗಿ ಅವರ ಸ್ಪಷ್ಟ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.

2. ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ವಹಿಸಬೇಕಾದ ಕ್ರಮ:-

ಈ ರೀತಿ ಆಡಳಿತ ಮಂಡಳಿಯವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಮೇಲೆ ತಿಳಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪೂರೈಸಿರುವ ಬಗ್ಗೆ ಸ್ವತಃ ಖಚಿತಪಡಿಸಿಕೊಂಡು ಎಲ್ಲಾ ದಾಖಲೆಗಳನ್ನು ದೃಢೀಕರಿಸಿ, ಈ ಕಛೇರಿಗೆ ಉಪನಿರ್ದೇಶಕರ ಮೂಲಕ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಒಂದು ವೇಳೆ ಮಾಹಿತಿಗಳನ್ನು ಪರಿಶೀಲಿಸದೇ ಸಲ್ಲಿಸಿ ತಿರಸ್ಕೃತಗೊಂಡಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದೇ ಆಗಿರುತ್ತದೆ. ಆದ್ದರಿಂದ ಆಡಳಿತ ಮಂಡಳಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಈ ಪ್ರಕ್ರಿಯೆ ನಂತರ ಮೇಲೆ ತಿಳಿಸಿದಂತೆ **ದಿನಾಂಕ:** 10.07.2017ರ ಅಂತ್ಯಕ್ಕೆ ಶಾಲಾ ಮಕ್ಕಳ ಸರಾಸರಿ ಹಾಜರಾತಿಯನ್ನು ಪರಿಗಣಿಸಿ ಉಳಿದಿರುವ ವಿಷಯವಾರು ಹೆಚ್ಚುವರಿ ಶಿಕ್ಷಕ/ಹುದ್ದೆಗಳನ್ನು ಗುರುತಿಸುವುದು. ಈ ರೀತಿ ಗುರುತಿಸಲ್ಪಟ್ಟ ಹೆಚ್ಚುವರಿ ಶಿಕ್ಷಕ/ಹುದ್ದೆಗಳ ವಿವರಗಳನ್ನು ಕ್ರೋಢೀಕರಿಸಿ, ಶಾಲಾವಾರು ಮತ್ತು ವಿಷಯವಾರು ತಃಖ್ತೆಯನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

3. ಉಪನಿರ್ದೇಶಕರ ಹಂತದಲ್ಲಿ ದೃಢೀಕರಿಸಬೇಕಾದ ದಾಖಲೆಗಳು:-

ಮೇಲ್ಕಂಡಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಲ್ಲಿಸಲ್ಪಟ್ಟ ಹೆಚ್ಚುವರಿ ಶಿಕ್ಷಕ/ಹುದ್ದೆಗಳ ವಿವರಗಳ ಮಾಹಿತಿಯನ್ನಾಧರಿಸಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಉಲ್ಲೇಖ-1ರ ಸರ್ಕಾರದ ಸುತ್ತೋಲೆಯ ಅನುಬಂಧ-1ರಂತೆ ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರನ್ನು/ಹುದ್ದೆಗಳನ್ನು ಗುರುತಿಸಲು ಕ್ರಮ ಕೈಗೊಳ್ಳುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಲ್ಲಿಸಿದ ಮಾಹಿತಿಯನ್ನೇ ಪೂರ್ಣವಾಗಿ ಅವಲಂಬಿಸದೇ ಉಪನಿರ್ದೇಶಕರು ತಮ್ಮ ಹಂತದಲ್ಲಿಯೂ ಸಹ ಸಲ್ಲಿಸಲ್ಪಟ್ಟ ಮಾಹಿತಿ ವಸ್ತುನಿಷ್ಠವಾಗಿರುವ ಬಗ್ಗೆ ಸ್ವತಃ ಖಚಿತಪಡಿಸಿಕೊಳ್ಳುವುದು. ಅತ್ಯಂತ ಅವಶ್ಯಕವಿರುತ್ತದೆ. ಈ ಸಂಬಂಧ ಜಿಲ್ಲೆಯಲ್ಲಿ ಇರುವ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲು ಕ್ರಮ ಕೈಗೊಳ್ಳುವುದು. ಆಕ್ಷೇಪಣೆಗಳನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸಿ, ಉಪನಿರ್ದೇಶಕರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರಿಗೆ ಆದೇಶ ನೀಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು. ಈ ದಿಸೆಯಲ್ಲಿ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಕಾರ್ಯಸೂಚಿಯ ವೇಳಾ ಪಟ್ಟಿಯಂತೆ ಕ್ರಮ ವಹಿಸುವ ಬಗ್ಗೆ ಗಮನಹರಿಸುವುದು.

4. ಉಪನಿರ್ದೇಶಕರ ಹಂತದಲ್ಲಿ ವಹಿಸಬೇಕಾದ ಕ್ರಮ:-

- ✓ ಹೆಚ್ಚುವರಿ ಶಿಕ್ಷಕರು ಕೆಲಸ ಮಾಡುತ್ತಿರುವ ಮತ್ತು ಸ್ಥಳಾಂತರಗೊಂಡ ಶಾಲೆಗಳ ಸಿಬ್ಬಂದಿ ತಃಖ್ತೆಗಳು.
- ✓ ಮೇಲಿನ ಎರಡು ಶಾಲೆಗಳಲ್ಲಿನ ತರಗತಿವಾರು ದಾಖಲಾತಿ/ಹಾಜರಾತಿ
- ✓ ಮೇಲಿನ ಎರಡು ಶಾಲೆಗಳ ಮಾನ್ಯತೆ ನವೀಕರಣ.
- ✓ ಆಡಳಿತ ಮಂಡಳಿಯಲ್ಲಿ ಯಾವುದೇ ವ್ಯಾಜ್ಯವಿಲ್ಲದಿರುವ ಬಗ್ಗೆ ದೃಢೀಕರಣ
- ✓ ಯಾವಾಗಿನಿಂದ ಹುದ್ದೆ ಖಾಲಿಯಾಗಿದೆ ಎಂಬ ಬಗ್ಗೆ ದಿನಾಂಕದೊಂದಿಗೆ ಸ್ಪಷ್ಟಪಡಿಸಿರುವ ಮಾಹಿತಿ.
- ✓ ಸಿಬ್ಬಂದಿ ಮಾದರಿಗನುಗುಣವಾಗಿ ವಿಷಯ ಹೊಂದಾಣಿಕೆಯಾಗಿರುವ ಕುರಿತು ಮಾಹಿತಿ.

**ದ್ವಿತೀಯ ಹಂತ:-**

ಈ ಪ್ರಕ್ರಿಯೆ ಮುಗಿದ ನಂತರ ಉಪನಿರ್ದೇಶಕರು ತಮ್ಮ ಹಂತದಲ್ಲಿ ಖಾಲಿ ಹುದ್ದೆಗಳನ್ನು ಮತ್ತು ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವ ಬಗ್ಗೆ ಉಲ್ಲೇಖ-1ರ ಸರ್ಕಾರದ ಸುತ್ತೋಲೆಯ ಅನುಬಂಧ-1ರಂತೆ ಕ್ರಮ ವಹಿಸುವುದು.

ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿರುವ ಶಾಲಾ ಆಡಳಿತ ಮಂಡಳಿ ಹಾಗೂ ಹೆಚ್ಚುವರಿ ಶಿಕ್ಷಕರನ್ನು ಮರು ಹೊಂದಾಣಿಕೆ ಮಾಡಲು ಗುರುತಿಸಿರುವ ಖಾಲಿ ಹುದ್ದೆಗಳಿರುವ ಶಾಲಾ ಆಡಳಿತ ಮಂಡಳಿಗೆ ಪತ್ರ ಬರೆದು ನಂತರ ಸಭೆ ಕರೆದು ಅವರುಗಳಿಗೆ ಹೆಚ್ಚುವರಿ ಶಿಕ್ಷಕರುಗಳ ಸಮಸ್ಯೆಯನ್ನು ತಿಳಿಯಪಡಿಸಿ, ಖಾಲಿ ಇರುವ ಹುದ್ದೆಗಳನ್ನು ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡುವುದು ಕಡ್ಡಾಯವಾಗಿರುವ ಅಂಶವನ್ನು ಸ್ಪಷ್ಟಪಡಿಸಬೇಕು. ಮೇಲ್ಕಂಡಂತೆ ಖಾಲಿ ಹುದ್ದೆಗಳನ್ನು ಗುರುತಿಸುವ ಬಗ್ಗೆ ಮತ್ತು ಕೌನ್ಸಿಲಿಂಗ್‌ನಲ್ಲಿ ಸದರಿ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರಿಂದ ಭರ್ತಿ ಮಾಡುವ ಬಗ್ಗೆ ಅವರ ಅಹವಾಲು ಏನಾದರೂ ಇದ್ದಲ್ಲಿ, ಉಪನಿರ್ದೇಶಕರು ಕರೆದಿರುವ ಸಭೆಗೆ ಸಮರ್ಥನೀಯ ದಾಖಲೆಗಳೊಂದಿಗೆ ವಿಷಯವನ್ನು ಮಂಡಿಸಲು ಅವಕಾಶ ಮಾಡಿಕೊಟ್ಟ ನಂತರ ಸದರಿ ಅಹವಾಲುಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಂಡ ನಂತರ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲು ಕ್ರಮ ವಹಿಸುವುದು.

ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಎಲ್ಲಾ ಶಿಕ್ಷಕರಿಗೆ ಕೌನ್ಸಿಲಿಂಗ್‌ನಲ್ಲಿ ಅವಕಾಶ ಮಾಡಿಕೊಡುವುದು ಕಡ್ಡಾಯವಾಗಿರುತ್ತದೆ. ಕೌನ್ಸಿಲಿಂಗ್ ಪ್ರಕ್ರಿಯೆ ತರುವಾಯು ವೇತನ ಪಾವತಿಗೆ ತೊಂದರೆಯಾಗದಂತೆ ಅದೇ ದಿನ ಮರು ಹಂಚಿಕೆ/ಸ್ಥಳ ನಿಯುಕ್ತಿ ಆದೇಶ ಹೊರಡಿಸುವುದು. ಸ್ಥಳನಿಯುಕ್ತಿ ಆದೇಶ ಹೊರಡಿಸಿದ ಮರು ದಿನ ಪೂರ್ವಾಹ್ನ ಆಡಳಿತ ಮಂಡಳಿಯವರು ಅಂತಹ ಶಿಕ್ಷಕರನ್ನು ಶಾಲಾ ಕರ್ತವ್ಯದಿಂದ ಬಿಡುಗಡೆಗೊಳಿಸುವುದು. ಇದಕ್ಕೆ ತಪ್ಪಿದಲ್ಲಿ ವ್ಯತ್ಯಾಸದ ಅವಧಿಗೆ ಆಡಳಿತ ಮಂಡಳಿ ತನ್ನ ಸ್ವಂತ ನಿಧಿಯಿಂದ ವೇತನ ನೀಡಬೇಕಾಗುತ್ತದೆ.

ಬಿಡುಗಡೆಗೊಂಡಂತಹ ಶಿಕ್ಷಕರು ಬಿಡುಗಡೆಗೊಂಡ ದಿನ ಅಥವಾ ಮರು ದಿನ ಪೂರ್ವಾಹ್ನದೊಳಗೆ ಸ್ಥಳ ನಿಯುಕ್ತಿಗೊಳಿಸಿರುವ ಶಾಲೆಯಲ್ಲಿ ಕರ್ತವ್ಯದ ಮೇಲೆ ತಪ್ಪದೇ ಹಾಜರಾಗತಕ್ಕದ್ದು.

ಯಾವುದೇ ಶಾಲಾ ಆಡಳಿತ ಮಂಡಳಿಯವರು ಹೆಚ್ಚುವರಿ ಶಿಕ್ಷಕರುಗಳನ್ನು ಕರ್ತವ್ಯಕ್ಕೆ ತೆಗೆದುಕೊಳ್ಳಲು ನಿರಾಕರಿಸಿದಲ್ಲಿ ಅಂತಹ ಶಾಲೆಯಲ್ಲಿನ ಖಾಲಿ ಹುದ್ದೆಗಳನ್ನು ಉಲ್ಲೇಖ-2ರ ಸರ್ಕಾರದ ಆದೇಶದಂತೆ ಶಾಶ್ವತ ಅನುದಾನ ರಹಿತ ಹುದ್ದೆ ಎಂದು ಘೋಷಿಸಲಾಗುವುದು. ಆದ್ದರಿಂದ, ಯಾವುದೇ ಹೆಚ್ಚುವರಿ ಶಿಕ್ಷಕರು ನಿಗಧಿತ ಕಾಲಾವಧಿಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಶಾಲೆಯಲ್ಲಿ ಕರ್ತವ್ಯದ ಮೇಲೆ ಹಾಜರಾಗಲು ಯಾವುದೇ ರೀತಿ ಆಡಳಿತ ಮಂಡಳಿಯಿಂದ ಅಡಚಣೆಯುಂಟಾದಲ್ಲಿ ಅದೇ ದಿನ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ಸಂಬಂಧಿಸಿದ ಹೆಚ್ಚುವರಿ ಶಿಕ್ಷಕರು ಲಿಖಿತವಾಗಿ ತಿಳಿಸುವುದು. ಈ ರೀತಿ ಮನವಿ ಸ್ವೀಕರಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮನವಿಯನ್ನು ಸ್ವೀಕರಿಸಿದ ದಿನ ಅಥವಾ ಮರು ದಿನ ತಪ್ಪದೇ ಆಡಳಿತ ಮಂಡಳಿಯನ್ನು ಸಂಪರ್ಕಿಸಿ ಪ್ರಕರಣವನ್ನು ವಸ್ತುನಿಷ್ಠವಾಗಿ ಇತ್ಯರ್ಥಪಡಿಸಿ ಉಪನಿರ್ದೇಶಕರಿಗೆ ವರದಿ ಮಾಡುವುದು. ಮೇಲ್ಕಂಡ ಎಲ್ಲಾ ಕ್ರಮಗಳ ಹೊರತಾಗಿಯೂ ಸಹ ಹೆಚ್ಚುವರಿ ಶಿಕ್ಷಕರನ್ನು ಕರ್ತವ್ಯದ ಮೇಲೆ ಹಾಜರುಪಡಿಸಲು ವಿಫಲರಾದಲ್ಲಿ ಸದರಿ ಶಿಕ್ಷಕರು ಮೂಲ ಶಾಲೆಯಲ್ಲಿ ಕರ್ತವ್ಯದಿಂದ ಬಿಡುಗಡೆ ಹೊಂದಿದ ದಿನಾಂಕದಿಂದ ವೇತನ ಪಾವತಿಗೆ ಬಾಧಿತರಾಗದಂತೆ ಕೂಡಲೇ ಈ ಕಛೇರಿಯ ಉಲ್ಲೇಖ-5ರ ಸುತ್ತೋಲೆಯಂತೆ ಕ್ರಮ ವಹಿಸುವುದು.

ಈ ಕಛೇರಿಯು ಈ ಕುರಿತು ನೀಡಿದ ಸಹಮತಿ ಆಧರಿಸಿ ಹುದ್ದೆ "ರದ್ಧತಿ ರಿಜಿಸ್ಟರ್" ನಲ್ಲಿ ಸೂಕ್ತ ನಮೂದು ಮಾಡತಕ್ಕದ್ದು ಮತ್ತು ವಾರ್ಷಿಕ ಆಯ-ವ್ಯಯ ತಯಾರಿಕೆಯಲ್ಲಿ ಈ ಹುದ್ದೆಗಳನ್ನು ಕೈ ಬಿಡುವುದು. ಈ ಅಂಶವನ್ನು ಆಡಳಿತ ಮಂಡಳಿಗಳಿಗೆ ಮನವರಿಕೆ ಮಾಡಿ ಜಿಲ್ಲಾ ಉಪನಿರ್ದೇಶಕರು ಕ್ರಮ ವಹಿಸಿದಲ್ಲಿ

- - - -> 4

ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆಯ ಬಗ್ಗೆ ನ್ಯಾಯಾಲಯ ಪ್ರಕರಣಗಳು ದಾಖಲಾಗುವುದಿಲ್ಲ ಎಂಬ ಅಂಶವನ್ನ ಗಮನಿಸತಕ್ಕದ್ದು. ಸರ್ಕಾರದ ಆದೇಶ ಸಂಖ್ಯೆ: ಇಡಿ 52 ವಿವಿಧ 1999 ದಿನಾಂಕ: 02.02.2000ರ ಸಿಬ್ಬಂದಿ ಮಾದರಿ ಪ್ರಕಾರ ವಿಷಯವಾರು ಶಿಕ್ಷಕರುಗಳು ಇರುವುದನ್ನು ಗಮನಿಸಿಕೊಂಡು ಆ ಶಾಲೆಯಲ್ಲಿನ ವಿಷಯವಾರು ಹುದ್ದೆಗಳಲ್ಲಿ ಜೇಷ್ಠತೆಗೆ ಅನುಗುಣವಾಗಿ ಕಿರಿಯ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸಲು ಕ್ರಮ ವಹಿಸುವುದು. ಇದರಲ್ಲಿ ಏನಾದರೂ ಲೋಪ ಬಂದಲ್ಲಿ ಅದಕ್ಕೆ ಸಂಬಂಧಿಸಿದ ಉಪನಿರ್ದೇಶಕರೇ ಜವಾಬ್ದಾರರು ಎಂದು ತಿಳಿಸಿದೆ. ಐದು ಅಥವಾ ಹೆಚ್ಚಿನ ವಿಭಾಗಗಳಲ್ಲಿ ಹೆಚ್ಚುವರಿ ಎಂದು ಗುರುತಿಸಿದಾಗ ಸಿಬ್ಬಂದಿ ಮಾದರಿ ಮತ್ತು ವಿಷಯವಾರು ಬೋದನಾವಧಿಗಳನ್ನು ಲೆಕ್ಕಾಚಾರ ಮಾಡಿಕೊಂಡು ಅವಶ್ಯಕತೆಗಿಂತ ಹೆಚ್ಚಿರುವ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸತಕ್ಕದ್ದು.

**ತೃತೀಯ ಹಂತ:-**

ಮೇಲ್ಕಂಡ ಎರಡೂ ಹಂತದ ಪ್ರಕ್ರಿಯೆ ಮುಗಿದ ನಂತರ ತಮ್ಮ ಹಂತದಲ್ಲಿ ಖಾಲಿ ಹುದ್ದೆಗಳು ಲಭ್ಯವಾಗದ ಕಾರಣ ಉಳಿದಿರುವ ಹೆಚ್ಚುವರಿ ಶಿಕ್ಷಕರನ್ನು ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಹಂತದಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮರು ಹಂಚಿಕೆ ಮಾಡುವ ಸಂಬಂಧ ಹೆಚ್ಚುವರಿ ಶಿಕ್ಷಕರ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿಯ ವಿಷಯವಾರು ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು giaest2@gmail.com ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು. ಖಾಲಿ ಹುದ್ದೆಗಳ ಮಾಹಿತಿಯನ್ನು ಮೇಲ್ಕಂಡಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಕ್ರೋಢೀಕೃತ ತಃಖ್ತೆಯನ್ನು ನಿಗದಿತ ಅನುಬಂಧದಲ್ಲಿ ವಿಷಯವಾರು ತಯಾರಿಸಿ ಸಲ್ಲಿಸುವುದು. [ಬ್ಲಾಕ್‌ವಾರು ಕಳುಹಿಸುವ ಅಗತ್ಯವಿರುವುದಿಲ್ಲ] ಈ ವಿಚಾರದಲ್ಲಿ ಆಡಳಿತ ಮಂಡಳಿಯವರು ಉಲ್ಲೇಖ(7)ರ ಸರ್ಕಾರದ ಆದೇಶದಂತೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಪ್ರಸ್ತಾವನೆಗಳನ್ನು ಇಲಾಖೆಗೆ ಸಲ್ಲಿಸಿದ್ದಲ್ಲಿ, ಅಂತಹ ಪ್ರಸ್ತಾಪಿತ ಖಾಲಿ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಗೆ ಬಳಸಿಕೊಳ್ಳಲು ಅನುಮತಿ ನೀಡಿದೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಸುತ್ತೋಲೆಯಲ್ಲಿನ ಮಾರ್ಗಸೂಚಿಯಂತೆ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಯನ್ನು ನಡೆಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು

- ✓ ಕಳೆದ ಬಾರಿ ಕಾರ್ಯಭಾರವಿದ್ದರೂ ಸಹ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅದೇ ಹುದ್ದೆಗೆ ಬೇರೆ ಶಿಕ್ಷಕರನ್ನು ಮರು ಹೊಂದಾಣಿಕೆ ಮಾಡುವ ಮೂಲಕ ಭರ್ತಿಸಲು ಶಿಫಾರಸ್ಸು ಮಾಡಿರುವ ಪ್ರಕರಣಗಳು ಇಲಾಖಾ ಗಮನಕ್ಕೆ ಬಂದಿರುತ್ತದೆ. ಈ ರೀತಿ ನಿಯಮಬಾಹಿರವಾಗಿ ಶಾಲೆಗಳ ಹಾಜರಾತಿ ಇದ್ದರೂ ಸಹ ಹೆಚ್ಚುವರಿ ಶಿಕ್ಷಕರನ್ನ ಗುರುತಿಸಿದ್ದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಮತ್ತು ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು.
- ✓ ಹೆಚ್ಚುವರಿ ಶಿಕ್ಷಕರನ್ನು ಮರು ಹಂಚಿಕೆ ಮಾಡಿದ ಶಾಲೆಗಳಲ್ಲಿನ ಖಾಲಿ ಹುದ್ದೆಗಳಿಗೆ ಆಡಳಿತ ಮಂಡಳಿ ಕರ್ತವ್ಯಕ್ಕೆ ಹಾಜರಪಡಿಸಿಕೊಳ್ಳಲು ನಿರಾಕರಿಸಿದ್ದು, ಈ ಹಿನ್ನೆಲೆಯಲ್ಲಿ ಆ ಶಾಲೆಯಲ್ಲಿನ ಖಾಲಿ ಹುದ್ದೆಯನ್ನು ಅನುದಾನ ರಹಿತ ಎಂದು ಘೋಷಣೆ ಮಾಡಿದ ಪ್ರಕ್ರಿಯೆ ಮಾಡುವುದು ಕಂಡು ಬರುತ್ತಿಲ್ಲ. ಉಪನಿರ್ದೇಶಕರು ಆ ಶಾಲೆಯಲ್ಲಿನ ಖಾಲಿ ಹುದ್ದೆಯನ್ನು ಅನುದಾನ ರಹಿತ ಎಂದು ಘೋಷಣೆ ಮಾಡದೆ ಅನುಮತಿ/ಅನುಮೋದನೆಗೆ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಉಪನಿರ್ದೇಶಕರನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುವುದು.

- - - - -> 5

- ✓ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 98 ದಿನಾಂಕ: 03.02.2000ರಲ್ಲಿ ಆಡಳಿತ ಮಂಡಳಿಯ ವತಿಯಿಂದ ಒಂದಕ್ಕಿಂತ ಹೆಚ್ಚು ಅನುದಾನಿತ ಪ್ರೌಢಶಾಲೆಗಳು ನಡೆಸುತ್ತಿದ್ದಲ್ಲಿ ಆಯಾ ಆಡಳಿತ ಮಂಡಳಿಯವರು ತಮ್ಮ ಅಧೀನದ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವಿಷಯವಾರು ಹೊಂದಾಣಿಕೆಯನ್ನು ಗಮನದಲ್ಲಿರಿಸಿಕೊಂಡು ಮರು ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಕಾರ್ಯಸೂಚಿಯಲ್ಲಿನ ನಿಗಧಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಸೂಚನೆ ನೀಡುವುದು. ಇಂತಹ ಮರು ಹೊಂದಾಣಿಕೆಯು ಮಂಜೂರಾದ ಅನುದಾನಿತ ಹುದ್ದೆಗಳಿಗೆ ಮಾತ್ರ ಸೀಮಿತವಾಗತಕ್ಕದ್ದು.
- ✓ ಖಾಸಗಿ ಅನುದಾನಿತ ಮತೀಯ ಅಲ್ಪಸಂಖ್ಯಾತ ಶಾಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ವರ್ಗದವರ ಸೇವಾ ಷರತ್ತು ಮತ್ತು ನೇಮಕಾತಿ ನಿಬಂಧನೆಗಳು] ನಿಯಮಗಳು 1999ರ ನಿಯಮ 11ರಡಿಯಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ✓ ಸರ್ಕಾರದ ಆದೇಶ ಸಂಖ್ಯೆ: ಇಡಿ 201 ಎಸ್‌ಇಎಸ್ 2011 ದಿನಾಂಕ: 09.06.2016ರ ವಿಶೇಷ ಶಿಕ್ಷಕರ, [ಚಿತ್ರಕಲೆ,ವೃತ್ತಿ, ಸಂಗೀತ ಇತ್ಯಾಧಿ] ನಿಧನ, ರಾಜಿನಾಮೆ, ನಿವೃತ್ತಿಯಿಂದ ತೆರವಾದ ಹುದ್ದೆಗಳು ರದ್ದಾಗುವುದುರಿಂದ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದು, ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಇಂತಹ ವಿಶೇಷ ಶಿಕ್ಷಕರನ್ನು ಕಾರ್ಯಭಾರವಿರುವ ಇತರೆ ಅನುದಾನಿತ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳಿಗೆ ಹುದ್ದೆ ಸಹಿತ ಸ್ಥಳಾಂತರಿಸುವುದು.
- ✓ ಜಿಲ್ಲಾ ಹಂತದಲ್ಲಿ ವಿಷಯವಾರು ಗುರುತಿಸಲಾದ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲಾ ವ್ಯಾಪ್ತಿಯಲ್ಲಿ ವಿಷಯವಾರು ಖಾಲಿ ಇರುವ ಹುದ್ದೆಗಳಿಗೆ ಮರು ಹಂಚಿಕೆ ಮಾಡಲು ಕ್ರಮ ವಹಿಸುವುದು. ಈ ಪ್ರಕ್ರಿಯೆ ಮುಗಿದ ನಂತರ ಜಿಲ್ಲಾ ಹಂತದಲ್ಲಿ ಖಾಲಿ ಹುದ್ದೆಗಳಿಲ್ಲದೆ ಮರು ಹಂಚಿಕೆಯಾಗದೆ ಇರುವ ವಿಷಯವಾರು ಶಿಕ್ಷಕರ ಪಟ್ಟಿಯನ್ನು ಮಾತ್ರ ರಾಜ್ಯ ಮಟ್ಟದ ಕೌನ್ಸಿಲಿಂಗ್‌ಗೆ ಸಲ್ಲಿಸುವುದು. ಆಯಾ ವಿಷಯಗಳ ಖಾಲಿ ಹುದ್ದೆಗಳು ಜಿಲ್ಲಾ ವ್ಯಾಪ್ತಿಯಲ್ಲಿ ಲಭ್ಯತೆ ಇದ್ದರೂ ಪರಿಶೀಲಿಸದೆ ರಾಜ್ಯ ಮಟ್ಟದ ಕೌನ್ಸಿಲಿಂಗ್‌ಗೆ ಪ್ರಸ್ತಾಪಿಸಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು.
- ✓ ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಪ್ರಸ್ತುತ ವರ್ಕಿಂಗ್ ಅರೇಂಜ್‌ಮೆಂಟ್ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಪ್ರಥಮ ಆದ್ಯತೆ ಮೇಲೆ ಪರಿಗಣಿಸಿ ಮರು ಹೊಂದಾಣಿಕೆ ಮಾಡಲು ಕ್ರಮ ವಹಿಸುವುದು. ಈ ಸಂಬಂಧ ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯನ್ನು ನಡೆಸುವ ಕುರಿತು ಕಾರ್ಯ ಸೂಚಿ / ವೇಳಾ ಪಟ್ಟಿ ಈ ಕೆಳಕಂಡಂತಿರುತ್ತದೆ.

**ಕಾರ್ಯಸೂಚಿ ಪಟ್ಟಿ**

| ಕ್ರ .ಸಂ | ಹೆಚ್ಚುವರಿ ಶಿಕ್ಷಕರ ಸ್ಥಳಾಂತರಿಸುವ ಚಟುವಟಿಕೆ | ದಿನಾಂಕ |
|---|---|---|
| 01 | ಆಡಳಿತ ಮಂಡಳಿಯ ವತಿಯಿಂದ ಹಲವು ಪ್ರೌಢಶಾಲೆಗಳನ್ನು ನಡೆಸುತ್ತಿರುವ ಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಖಾಲಿ ಇರುವ ಅವರದೇ ಅನುದಾನಿತ ಪ್ರೌಢಶಾಲೆಗಳಲ್ಲಿನ ಹುದ್ದೆಗಳಿಗೆ ಮರು ಹೊಂದಾಣಿಕೆ/ಸ್ಥಳಾಂತರ ಮಾಡಿಕೊಳ್ಳುವುದು. | 20.07.2017 |
| 02. | ಈ ಪ್ರಕ್ರಿಯೆ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ/ಖಾಲಿ ಹುದ್ದೆಗಳ ವಿವರಗಳನ್ನು ಗುರುತಿಸುವುದು. | 25.07.2017 |
| 03. | ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪ್ರಸ್ತಾವನೆ ಸಲ್ಲಿಸಲ್ಪಟ್ಟ ತರುವಾಯ ಉಪನಿರ್ದೇಶಕರು ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ/ಖಾಲಿ ಹುದ್ದೆಗಳ ವಿವರಗಳನ್ನು ಗುರುತಿಸುವುದು. | 28.07.2017 |

----> 6

| | | |
|---|---|---|
| ೦4. | ಜಿಲ್ಲೆಯಲ್ಲಿ ಇರುವ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವ ದಿನಾಂಕ | 03.08.2017 |
| ೦5. | ಜಿಲ್ಲಾ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ: | 10.08.2017 |
| ೦6. | ಉಪನಿರ್ದೇಶಕರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರಿಗೆ ಆದೇಶ ನೀಡುವ ದಿನಾಂಕ | 16.08.2017 |
| ೦7. | ಈ ಪ್ರಕ್ರಿಯೆ ಮುಗಿದ ನಂತರ ಜಿಲ್ಲಾ ಹಂತದಲ್ಲಿ ಖಾಲಿ ಹುದ್ದೆಗಳಿಲ್ಲದೆ ಮರುಹಂಚಿಕೆಯಾಗದೇ ಬಾಕಿ ಇರುವ ಹೆಚ್ಚುವರಿ ಶಿಕ್ಷಕರ ಪಟ್ಟಿ ಹಾಗೂ ಖಾಲಿ ಹುದ್ದೆ ಮಾಹಿತಿಯನ್ನು ನಿರ್ದೇಶಕರು[ಪ್ರೌಢ ಶಿಕ್ಷಣ] ಇವರಿಗೆ ಕಳುಹಿಸುವ ದಿನಾಂಕ | 19.08.2017 |
| ೦8. | ಈ ಪಟ್ಟಿಯನ್ನು ಪರಿಶೀಲಿಸಿ, ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಆಹ್ವಾನಿಸುವ ದಿನಾಂಕ | 26.08.2017 |
| ೦9. | ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಹೆಚ್ಚುವರಿ ಪಟ್ಟಿ ಪ್ರಕಟಿಸುವ ದಿನಾಂಕ | 28.08.2017 |
| 10. | ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ, ಸ್ಥಳಾಂತರಗೊಂಡ ಶಿಕ್ಷಕರುಗಳಿಗೆ ಆದೇಶ ದಿನಾಂಕ | 31.08.2017 |

ಮೇಲ್ಕಂಡ ಎಲ್ಲಾ ಪ್ರಕ್ರಿಯೆಗಳನ್ನು ಉಲ್ಲೇಖ-1 ರಿಂದ 4ರವರೆಗಿನ ಸರ್ಕಾರದ ಸುತ್ತೋಲೆಗಳಲ್ಲಿನ ನಿರ್ದೇಶನ/ ಮಾರ್ಗಸೂಚಿ ಮತ್ತು ನಿರ್ದಿಷ್ಟಪಡಿಸಿದ ಕಾರ್ಯ ವಿಧಾನದಂತೆ ಕ್ರಮ ವಹಿಸಲು ಆದೇಶಿಸಿದೆ. ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ಮಾಹಿತಿಯನ್ನು ಪಡೆಯುವ ಸಲುವಾಗಿ ಅನುಬಂಧಗಳನ್ನು ನಿಗಧಿಪಡಿಸಿದೆ. ಎಲ್ಲಾ ಉಪನಿರ್ದೇಶಕರು ಅನುಬಂಧದಲ್ಲಿ ನಿರ್ಧಿಷ್ಟಪಡಿಸಿದ ತಂತ್ರಾಂಶದಲ್ಲಿ ಮಾಹಿತಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ನಿರ್ದೇಶಕರು (ಪ್ರೌಢ ಶಿಕ್ಷಣ)**

ಇವರಿಗೆ

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ಇವರಿಗೆ ಕಳುಹಿಸುತ್ತಾ, ತಮ್ಮ ಆಯುಕ್ತಾಲಯದ ವ್ಯಾಪ್ತಿಯಲ್ಲಿರುವ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸುವ ಬಗ್ಗೆ ಮೇಲ್ಕಂಡಂತೆ ಕ್ರಮ ವಹಿಸಲು ತಿಳಿಸಿದೆ.
2) ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುತ್ತಾ, ಸಂಬಂಧಿಸಿದ ಆಡಳಿತ ಮಂಡಳಿಯ ಮುಖ್ಯಸ್ಥರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಮ್ಮ ಹಂತದಲ್ಲಿಯೇ ಮೇಲ್ಕಂಡ ಸುತ್ತೋಲೆಯಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದೆ.
3) ಈ ಕಛೇರಿಯ ಇ-ಗೌರ್ನನ್ಸ್ ಶಾಖೆಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಇ-ಮೇಲ್ ಮೂಲಕ ಕಳುಹಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
4) ಕಛೇರಿ ಪ್ರತಿ.

z:\excess suttole.doc

## ಅನುಬಂಧ-1

**ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ 2017-18ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಜಿಲ್ಲಾಮಟ್ಟದಲ್ಲಿ ಸ್ಥಳಾಂತರಗೊಳಿಸಿದ ಶಿಕ್ಷಕರ ಮಾಹಿತಿ**

| ಕ್ರ.ಸಂ | ಶಿಕ್ಷಕರ ಹೆಸರು | ಬೋಧನಾ ವಿಷಯ | ಕಾರ್ಯ ನಿರ್ವಹಿಸುತ್ತಿರುವ | | ಸ್ಥಳಾಂತರಗೊಳಿಸಿದ | | ಷರಾ |
|---|---|---|---|---|---|---|---|
| | | | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | |
| 1 | 2 | 3 | 4 | 5 | 6 | 7 | 8 |
| | | | | | | | |

ವಿಶೇಷ ಸೂಚನೆ: 1. ಮೇಲ್ಕಂಡ ಮಾಹಿತಿಯನ್ನು ವಿಷಯವಾರು ಪ್ರತ್ಯೇಕ ಹಾಳೆಯಲ್ಲಿ ಸಲ್ಲಿಸುವುದು.

2 ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ **Exceess teachers-2017 Annex-1** ರ ಶೀರ್ಷಿಕೆಯಡಿಯಲ್ಲಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು **giaest2@gmail.com** ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.

## ಅನುಬಂಧ-2

### 2017-18ನೇ ಸಾಲಿನ ಹೆಚ್ಚುವರಿ ಶಿಕ್ಷಕ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಜಿಲ್ಲಾ ಮಟ್ಟದ ಕೌನ್ಸಿಲಿಂಗ್ ಮುಕ್ತಾಯಗೊಂಡ ನಂತರ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಉಳಿದ ಖಾಲಿ ಹುದ್ದೆಗಳ ಮಾಹಿತಿ

| ಕ್ರ.ಸಂ | ಜಿಲ್ಲೆಯ ಹೆಸರು | ಬೋಧನಾ ವಿಷಯ | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | ಖಾಲಿ ಹುದ್ದೆ ತೆರವಾದ ಕಾರಣ | ತೆರವಾದ ದಿನಾಂಕ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ವಿಶೇಷ ಸೂಚನೆ: 1. ಮೇಲ್ಕಂಡ ಮಾಹಿತಿಯನ್ನು ವಿಷಯವಾರು ಪ್ರತ್ಯೇಕವಾಗಿ ಕಡ್ಡಾಯವಾಗಿ ನುಡಿ ಫಾಂಟ್‌ನಲ್ಲಿ ಎಂ.ಎಸ್ ಎಕ್ಸೆಲ್‌ನಲ್ಲಿ ಒಂದೇ ಹಾಳೆಯಲ್ಲಿ ಸಲ್ಲಿಸುವುದು.

2.ಮೇಲ್ಕಂಡ ಖಾಲಿಗಳ ಹುದ್ದೆಯ ಮಾಹಿತಿಯು ಅನುದಾನಿತ ಪ್ರೌಢ ಶಾಲೆಗಳಲ್ಲಿರುವ ಆರಂಭದಿಂದ ಈವರೆಗಿನ ಎಲ್ಲಾ ಖಾಲಿ ಹುದ್ದೆಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. [ ಖಾಲಿ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಆಡಳಿತ ಮಂಡಳಿಯಿಂದ ಇಲಾಖೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದಲ್ಲಿ ಪ್ರಸ್ತಾವನೆಯ ಹಂತದೊಂದಿಗೆ ಷರಾ ಅಂಕಣದಲ್ಲಿ ನಮೂದಿಸುವುದು ]

3. ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ **Exceess teachers-2017 Annex-2** ರ ಶೀರ್ಷಿಕೆಯಡಿಯಲ್ಲಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು **giaest2@gmail.com** ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.

ಅನುಬಂಧ-3

## ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ 2017-18ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕ ಸ್ಥಳಾಂತರದ ಪ್ರಕ್ರಿಯೆಯಲ್ಲಿ ರಾಜ್ಯ ಮಟ್ಟದ ಕೌನ್ಸೆಲಿಂಗ್‌ಗೆ ಪ್ರಸ್ತಾಪಿಸಿದ ಸಿಬ್ಬಂದಿಗಳ ಮಾಹಿತಿ

| ಕ್ರ.ಸಂ | ಶಿಕ್ಷಕರ ಹೆಸರು | ಬೋಧನಾ ವಿಷಯ | | | ನೇಮಕಾತಿ ಅನುಮೋದನೆ ದಿನಂಕ | ಸಿಬ್ಬಂದಿಯನ್ನು ಸ್ಥಳಾಂತರಿಸಲು ಕಾರಣ | ಷರಾ |
|---|---|---|---|---|---|---|---|
| | | | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | | | |
| 1 | 2 | 3 | 4 | 5 | 6 | 7 | 8 |
| | | | | | | | |

ವಿಶೇಷ ಸೂಚನೆ: 1. ಮೇಲ್ಕಂಡ ಮಾಹಿತಿಯನ್ನು ವಿಷಯವಾರು ಪ್ರತ್ಯೇಕ ಹಾಳೆಯಲ್ಲಿ ಸಲ್ಲಿಸುವುದು.

2. ಅಂಕಣ-7ರಲ್ಲಿ ಸ್ಥಳಾಂತರಗೊಂಡ / ಶೂನ್ಯ ಶಾಲೆ ಎಂದು ಪರಿಗಣಿಸಿದ ಅಥವಾ ಸಿಬ್ಬಂದಿಯನ್ನು ಹೆಚ್ಚುವರಿ ಎಂದು ಪರಿಗಣಿಸಲು ಮತ್ತಿತರ ಸಮರ್ಥನೀಯ ಅಂಶಗಳನ್ನು ಉಲ್ಲೇಖಿಸುವುದು.
3. ರಾಜ್ಯ ಮಟ್ಟದ ಕೌನ್ಸೆಲಿಂಗ್‌ಗೆ ಸಿಬ್ಬಂದಿ ಅಥವಾ ವಿಷಯವಾರು ಶಿಕ್ಷಕರು ಇಲ್ಲದೇ ಇದ್ದಲ್ಲಿ "ಶೂನ್ಯ" ವರದಿಯನ್ನು ಸಲ್ಲಿಸುವುದು.
4. ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ **Exceess teachers-2017 Annex-3** ರ ಶೀರ್ಷಿಕೆಯಡಿಯಲ್ಲಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು **giaest2@gmail.com** ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.

ಅನುಬಂಧ-4

ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ 2017-18ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಆಡಳಿತ ಮಂಡಳಿಯಿಂದ ಕರ್ತವ್ಯದ ಮೇಲೆ ತೆಗೆದುಕೊಳ್ಳಲು ನಿರಾಕರಿಸಲ್ಪಟ್ಟ ಸಿಬ್ಬಂದಿಗಳ ಮಾಹಿತಿ

| ಕ್ರ.ಸಂ | ಶಿಕ್ಷಕರ ಹೆಸರು | ಬೋಧನಾ ವಿಷಯ | ಕಾರ್ಯ ನಿರ್ವಹಿಸುತ್ತಿದ್ದ | | ಸ್ಥಳಾಂತರಗೊಳಿಸಿದ | | ಕರ್ತವ್ಯದ ಮೇಲೆ ತೆಗೆದುಕೊಳ್ಳಲು ನಿರಾಕರಿಸಲು ಕಾರಣ |
|---|---|---|---|---|---|---|---|
| | | | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | ಶಾಲೆಯ ಹೆಸರು ವಿಳಾಸ | ಆಡಳಿತ ಮಂಡಳಿಯ ಹೆಸರು ವಿಳಾಸ | |
| 1 | 2 | 3 | 4 | 5 | 6 | 7 | 8 |
| | | | | | | | |

| ಶಾಲಾ ಕರ್ತವ್ಯಕ್ಕೆ ಅಥವಾ ಬಿ.ಇ.ಓ ಕಛೇರಿಯಲ್ಲಿ ಹಾಜರಾಗಿರುವರೇ | ಬಿ.ಇ.ಓ ಕಛೇರಿಯಲ್ಲಿ ವಹಿಸಲಾದ ಕ್ರಮ | ಸ್ಥಳನಿಯುಕ್ತಿಗೊಳಿಸಿದ ಮತ್ತು ಕರ್ತವ್ಯದ ಮೇಲೆ ತೆಗೆದುಕೊಳ್ಳಲು ನಿರಾಕರಿಸಿದ ಶಾಲಾ ಆಡಳಿತ ಮಂಡಳಿಯ ಮೇಲೆ ಕೈಗೊಳ್ಳಲಾದ ಕ್ರಮ |
|---|---|---|
| 9 | 10 | 11 |

ವಿಶೇಷ ಸೂಚನೆ: 1. ಮೇಲ್ಕಂಡ ಮಾಹಿತಿಯನ್ನು ವಿಷಯವಾರು ಪ್ರತ್ಯೇಕ ಹಾಳೆಯಲ್ಲಿ ಸಲ್ಲಿಸುವುದು.

2. 2017-18ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಯ ನಂತರ ಖಚಿತ ಪಡಿಸಿಕೊಳ್ಳುವ ಮೂಲಕ ಮೇಲ್ಕಂಡ ಮಾಹಿತಿಯನ್ನು ನಿಖರವಾಗಿ ಸಲ್ಲಿಸುವುದು.
3. ಇಂತಹ ಪ್ರಕರಣಗಳು ಇಲ್ಲದೇ ಇದ್ದಲ್ಲಿ "ಶೂನ್ಯ" ವರದಿಯನ್ನು ಸಲ್ಲಿಸುವುದು.
4. ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ **Exceess teachers-2017 Annex-4** ರ ಶೀರ್ಷಿಕೆಯಡಿಯಲ್ಲಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು **giaest2@gmail.com** ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.

## ಅನುಬಂಧ-5

### ಹೆಚ್ಚುವರಿ ಶಿಕ್ಷಕ ಸ್ಥಳಾಂತರದ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರಸ್ತುತ ನ್ಯಾಯಾಲಯದಲ್ಲಿರುವ ಪ್ರಕರಣಗಳ ವಿವರ

| ಕ್ರ.ಸಂ | ದಾವೆ ಹೂಡಿದ ಅರ್ಜಿದಾರರು | ದಾವೆ ಹೂಡಿದ ನ್ಯಾಯಾಲಯ / ಇಎಟಿ / ಉ.ನ್ಯಾ ಇತ್ಯಾದಿ | ದಾವೆ ಸಂಖ್ಯೆ | ದಾವೆಯಲ್ಲಿ ಕೋರಲಾದ ಪರಿಹಾರ | ಪ್ರತಿವಾದಿಗಳು | ವ್ಯಾಜ್ಯ ನಿರ್ವಾಹಣಾಧಿಕಾರಿಗಳು | ದಾವೆಯ ಪ್ರಸ್ತುತ ಹಂತ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ವಿಶೇಷ ಸೂಚನೆ: 1. ಮಾಹಿತಿಯನ್ನು ನುಡಿ ಅಕ್ಷರದಲ್ಲಿ ಹಾಗೂ ಎಂ.ಎಸ್.ಎಕ್ಸಲ್ ನಲ್ಲಿಯೆ ಗಣಕೀಕರಿಸಿ **Exceess teachers-2017 Annex-5**ರ ಶೀರ್ಷಿಕೆಯಡಿಯಲ್ಲಿ ಒಂದು ಹಾರ್ಡ್ ಕಾಪಿ ಮತ್ತು ಒಂದು ಸಾಫ್ಟ್ ಕಾಪಿಯನ್ನು **giaest2@gmail.com** ಈ ವಿಳಾಸಕ್ಕೆ ಈ ಕಛೇರಿಗೆ ಇ-ಮೇಲ್ ಮೂಲಕ ಸಲ್ಲಿಸತಕ್ಕದ್ದು.